**BEFORE THE MOTOR ACCIDENT CLAIMS TRIBUNAL, CHIEF JUDGE, COURT OF SMALL CAUSES JUDGE, BENGALURU.**

**MVC.NO.4609/2024**

**RW1**

| | |
|---|---|
| Name | Manjunatha |
| Father's name | Guttappa |
| Age | 52 years |
| Occupation | Police Sub Inspector |
| Residence | Madivala police station, Benglauru. |

**ಸಾಕ್ಷಿಗೆ ದಿನಾಂಕಃ 14.11.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಮುಖ್ಯ ವಿಚಾರಣೆ: 2ನೇ ಎದುರುದಾರರ ಪರ ವಕೀಲರಾದ ಶ್ರೀ.ಕೆ.ಎಸ್.ಕೆ. ರವರಿಂದಃ**

1) ದಿಃ**30.03.2024** ರಂದು ನಾನು ಜೀವನ್ ಭೀಮ ನಗರ ಪೋಲಿಸ್ ಠಾಣೆಯಲ್ಲಿ ಎ.ಎಸ್.ಐ ಆಗಿ ಕರ್ತವ್ಯ ಮಾಡುತ್ತಿದ್ದೆನು. ಸದರಿ ಪೋಲಿಸ್ ಠಾಣೆಯ ಸಿ.ಆರ್.**80/2024** ಪ್ರಕರಣದ ತನಿಖೆಯನ್ನು ನಾನೇ ಮಾಡಿದ್ದೇನೆ. ನ್ಯಾಯಾಲಯದಿಂದ ಸಮನ್ಸ್ ಬಂದಿತ್ತು ಮತ್ತು ಆ ಸಮನ್ಸ್ ನಲ್ಲಿ ನಮೂದು ಇದ್ದಂತಹ ದಾಖಲೆಗಳನ್ನು ಹಾಜರುಪಡಿಸಿದ್ದೇನೆ.

2) ಸಿ.ಆರ್.**80/2024** ಪ್ರಕರಣದಲ್ಲಿ ಅಪಘಾತವನ್ನು ಮಾಡಿದಂತಹ

ವಾಹನವನ್ನು ಜಪ್ತಿ ಮಾಡಿದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿದ್ದೇನೋ ಹೇಗೆ ಎಂದರೆ ನಾವು ಐಎಂವಿ ಕಲಂ **133** ರ ರೀತಿಯಲ್ಲಿ ನೋಟೀಸನ್ನು ನೀಡಿದೆವು, ಆಗ ಆ ವಾಹನದ ಮಾಲೀಕರು "ವಾಹನವನ್ನು ರಿಪೇರಿ ಮಾಡಿಸಿ ಆಗಿದೆ" ಎಂದು ಉತ್ತರವನ್ನು ನೀಡಿದರು, ಆ ಕಾರಣದಿಂದ ನಾವು ಆ ವಾಹನವನ್ನು ಜಪ್ತಿ ಮಾಡಲಿಲ್ಲ ಮತ್ತು ಆ ವಾಹನವನ್ನು ಐಎಂವಿ ಪರೀಕ್ಷೆಗೆ ಒಳಪಡಿಸಿರುವುದಿಲ್ಲ, ಬದಲಿಗೆ ಅಂತಿಮ ವರದಿಯನ್ನು ಸಲ್ಲಿಸಿದೆವು.

3) ಈ ಹಂತದಲ್ಲಿ ಮಾನ್ಯ ವಕೀಲರು ಈ ಸಾಕ್ಷಿದಾರರನ್ನು ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದಾರೆ. ಮಾನ್ಯ ವಕೀಲರು "ಈ ಸಾಕ್ಷಿದಾರರು ತನಿಖಾ ಕಾಲದಲ್ಲಿ ಪಾಲನೆ ಮಾಡಬೇಕಾದ ನಿಯಮಗಳನ್ನು ಪಾಲನೆ ಮಾಡಿರುವುದಿಲ್ಲ, ಮತ್ತು ಆ ಬಗ್ಗೆ ಪ್ರಶ್ನೆಗಳನ್ನು ಕೇಳಬೇಕಾಗಿದೆ" ಎಂದು ಅನುಮತಿ ಕೇಳಿದ್ದಾರೆ. ಅನುಮತಿ ನೀಡಿದೆ.

**ಪಾಟೀ ಸವಾಲು: 2 ನೇ ಎದುರುದಾರರ ಪರ ಶ್ರೀ.ಕೆಎಸ್ ಕೆ ವಕೀಲರಿಂದಃ**

4) ಅಪಘಾತವನ್ನು ಮಾಡಿದ ವಾಹನವನ್ನು ನಾನು ಜಪ್ತಿ ಮಾಡಿರುವುದಿಲ್ಲ ಮತ್ತು ಆ ವಾಹನವನ್ನು ಐಎಂವಿ ಪರೀಕ್ಷೆಗೆ ಒಳಪಡಿಸಿರುವುದಿಲ್ಲ ಮತ್ತು ಆ ಕಾರಣದಿಂದ ನಾನು ಸಲ್ಲಿಸಿರುವ ಅಂತಿಮ ವರದಿಗೆ ಯಾವುದೇ ಮಾನ್ಯತೆ ಇರುವುದಿಲ್ಲ ಎಂದರೆ ಸುಳ್ಳು.

SCCH – 01
MVC No.4609/2024
RW1

**<u>ಪಾಟೀ ಸವಾಲು: ಅರ್ಜಿದಾರರ ಪರ ಶ್ರೀ.ಬಿ.ಸಿ.ವಿ ವಕೀಲರಿಂದಃ</u>**

5) ಅಪಘಾತವು ಆದ ಮಾರನೇ ದಿನ ಪ್ರಕರಣವನ್ನು ನೋಂದಾಯಿಸಲಾಗಿದೆ ಎಂದರೆ ಸರಿ. ಐಎಂವಿ ಕಾಯ್ದೆ ಕಲಂ **133** ರೀತಿ ನೋಟೀಸನ್ನು ದಿಃ**11.04.2024** ರಂದು ನೀಡಲಾಗಿದೆ.

6) ದಿಃ**15.05.2024** ರಂದು ಸದರಿ ವಾಹನದ ಮಾಲೀಕರು ತಮ್ಮ ಉತ್ತರವನ್ನು ನಮಗೆ ನೀಡಿದ್ದಾರೆ. ಆ ಉತ್ತರದ ಜೊತೆಯಲ್ಲಿಯೇ ಆ ವಾಹನದ ಮಾಲೀಕರು ಚಾಲನಾ ಪರವಾನಗಿಯನ್ನು ಅಂದರೆ ಓರ್ವ ಪ್ರದೀಪ್ ಎನ್ನುವವರ ಚಾಲನಾ ಪರವಾನಗಿ, ಆಧಾರ್ ಕಾರ್ಡ್ ಮತ್ತು ಆರ್.ಸಿ ಪುಸ್ತಕ ಮತ್ತು ವಿಮಾ ಪಾಲಿಸಿ ಮತ್ತು ವಾಹನದ ಫೋಟೋಗಳನ್ನು ಸಹಾ ಕಳುಹಿಸಿದ್ದರು.

7) ನಾನು ಕಾನೂನಿನ ಪ್ರಕಾರವಾಗಿ ತನಿಖೆಯನ್ನು ಮಾಡಿ ಅಂತಿಮ ವರದಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿ.

**<u>ಮರು ವಿಚಾರಣೆಃ ಇಲ್ಲ.</u>**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)

**(ಓ.ಹೇ.ಕೇ.ಸ.ಇ)**

**ಮುಖ್ಯ ನ್ಯಾಯಾಧೀಶರು,**
ಲಘು ವ್ಯವಹಾರಗಳ ನ್ಯಾಯಾಲಯ,

ಬೆಂಗಳೂರು.